# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 611

ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 05.03.2021

| | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಮಾನಸಗಂಗೋತ್ರಿಗೆ ಮತ್ತು ಮುಕ್ತ ವಿಶ್ವವಿದ್ಯಾನಿಲಯಕ್ಕೆ ನಗರ ಬಸ್ ನಿಲ್ದಾಣದಿಂದ ಹಾಗೂ ನಗರದ ಇತರೆ ಕಡೆಗಳಿಂದ ಪ್ರತಿ ದಿನ ಮೈಸೂರು ನಗರ ಮತ್ತು ಹೊರ ಊರುಗಳಿಂದ ಬರುವ ಸಾವಿರಾರು ವಿದ್ಯಾರ್ಥಿಗಳು ಓಡಾಡುತ್ತಿದ್ದು ಸೂಕ್ತ ನಗರ ಸಾರಿಗೆ ಸೌಲಭ್ಯ ಇಲ್ಲದೆ ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮಾನಸಗಂಗೋತ್ರಿಯ ಮಾರ್ಗವಾಗಿ ಗದ್ದಿಗೆ ಹಾಗೂ ಇಲವಾಲ ಕಡೆಗೆ ಕಾರ್ಯಾಚರಣೆಯಾಗುವ ಸಾರಿಗೆಗಳಿಗೆ ಗಂಗೋತ್ರಿಯ ಮುಖ್ಯದ್ವಾರಗಳ ಬಳಿ ಕಡ್ಡಾಯವಾಗಿ ನಿಲುಗಡೆಯನ್ನು ನೀಡಲಾಗುತ್ತಿದೆ.<br><br>ಮೈಸೂರು-ಗದ್ದಿಗೆ ಮಾರ್ಗದಲ್ಲಿ ಸಮಯ ಬೆಳಿಗ್ಗೆ 06.15 ರಿಂದ ರಾತ್ರಿ 21.50 ಗಂಟೆಯವರೆಗೆ 124 ಸುತ್ತುವಳಿಗಳು ಕಾರ್ಯಾಚರಣೆಯಲ್ಲಿವೆ. ಪ್ರತಿ 5ರಿಂದ 10 ನಿಮಿಷದ ಅಂತರದಲ್ಲಿ ಬಸ್ಸುಗಳು ಕಾರ್ಯಾಚರಣೆಯಲ್ಲಿದ್ದು, ಈ ಎಲ್ಲಾ ಸಾರಿಗೆಗಳಿಗೆ ಮಾನಸಗಂಗೋತ್ರಿಯ ಮುಖ್ಯದ್ವಾರಗಳ ಬಳಿ ನಿಲುಗಡೆ ನೀಡಲಾಗುತ್ತಿದೆ.<br><br>ಅಲ್ಲದೆ, ಮೈಸೂರು ನಗರ ಬಸ್ ನಿಲ್ದಾಣದಿಂದ ಗ್ರಾಮಾಂತರ ಬಸ್ ನಿಲ್ದಾಣ, ರೈಲು ನಿಲ್ದಾಣ, ವಿವಿ ಪುರಂ ಮಾರ್ಗವಾಗಿ ಇಲವಾಲ ರಸ್ತೆಯಲ್ಲಿ ಕಾರ್ಯಾಚರಿಸುವ ಎಲ್ಲಾ ವಾಹನಗಳು ಬೆಳಗ್ಗೆ 5.55ರಿಂದ ರಾತ್ರಿ 21.55ರವರೆಗೆ 175 ಸುತ್ತುವಳಿಗಳು ಕಾರ್ಯಾಚರಣೆಯಲ್ಲಿದ್ದು, ಪ್ರತಿ 5 ರಿಂದ 10 ನಿಮಿಷದ ಅಂತರದಲ್ಲಿ ಸಾರಿಗೆಗಳು ಕಾರ್ಯಾಚರಣೆಯಲ್ಲಿವೆ. ಈ ಎಲ್ಲಾ ಸಾರಿಗೆಗಳಿಗೆ ಮುಕ್ತ ವಿಶ್ವವಿದ್ಯಾನಿಲಯದ ಬಳಿ ನಿಲುಗಡೆ ನೀಡಲಾಗುತ್ತಿದೆ.<br><br>ಪ್ರಸ್ತುತ ಕಾರ್ಯಾಚರಿಸುತ್ತಿರುವ ಸಾರಿಗೆಗಳು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿದೆ. |
| ಆ) | ಮಾನಸಗಂಗೋತ್ರಿಗೆ ಹೋಗುತ್ತಿದ್ದ 135/134 ಮಾರ್ಗ ಸಂಖ್ಯೆಯ ಬಸ್‌ಗಳು ಕೂಡಾ ಸರಿಯಾಗಿ ಓಡಾಡದೇ ಗಂಗೋತ್ರಿಯ ಮತ್ತು ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾರ್ಗ ಸಂಖ್ಯೆ 135ರಲ್ಲಿ 18 ಸುತ್ತುವಳಿಗಳಿಂದ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಮಾರ್ಗ ಸಂಖ್ಯೆ 134ನ್ನು ಪ್ರಯಾಣಿಕರ ಅಲಭ್ಯತೆ ಹಾಗೂ ಸಾರಿಗೆ ಆದಾಯ ಉತ್ತಮವಾಗಿಲ್ಲದ ಕಾರಣದಿಂದಾಗಿ ಹಲವಾರು ವರ್ಷಗಳ ಹಿಂದೆಯೇ ಸ್ಥಗಿತಗೊಳಿಸಲಾಗಿರುತ್ತದೆ. ಆದುದರಿಂದ, ಈ ಸಾರಿಗೆ ಪುನರಾರಂಭಿಸುವ ಅವಶ್ಯಕತೆ ಕಂಡುಬರುವುದಿಲ್ಲ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮಾನಸಗಂಗೋತ್ರಿ ಮತ್ತು ಮುಕ್ತ ವಿಶ್ವವಿದ್ಯಾನಿಲಯದ ಮಾರ್ಗವಾಗಿ ಒಟ್ಟು 299 ಸುತ್ತುವಳಿಗಳು ಕಾರ್ಯಾಚರಣೆಯಲ್ಲಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿದೆ. |

...2

| | | |
|---|---|---|
| ಇ) | ನಗರ ಬಸ್ ನಿಲ್ದಾಣದಿಂದ ಮಾನಸಗಂಗೋತ್ರಿಗೆ ಮತ್ತು ಗಂಗೋತ್ರಿಯಿಂದ ನಗರ ಬಸ್ ನಿಲ್ದಾಣಕ್ಕೆ ಸರಸ್ವತಿಪುರಂ ಮೂಲಕ ಮತ್ತು ರೈಲು ನಿಲ್ದಾಣ ಹಾಗೂ ವಿ.ವಿ.ಪುರಂ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ? | ಪ್ರಸ್ತುತ, ಎರಡು ಮಾರ್ಗಗಳಲ್ಲಿ ಅಂದರೆ ಸರಸ್ವತಿಪುರಂ-ಮಾನಸಗಂಗೋತ್ರಿ-ಗದ್ದಿಗೆ ಮಾರ್ಗ ಮತ್ತು ಗ್ರಾಮಾಂತರ ಬಸ್ ನಿಲ್ದಾಣ-ರೈಲು ನಿಲ್ದಾಣ-ವಿವಿಪುರಂ-ಮುಕ್ತ ವಿಶ್ವವಿದ್ಯಾನಿಲಯ/ಮಾನಸಗಂಗೋತ್ರಿ-ಇಲವಾಲ ಮಾರ್ಗಗಳಲ್ಲಿ ಪ್ರತಿ 05ರಿಂದ 10 ನಿಮಿಷದ ಅವಧಿಯಲ್ಲಿ ಒಟ್ಟು 299 ಸುತ್ತುವಳಿಗಳು ಕಾರ್ಯಾಚರಣೆಯಲ್ಲಿರುತ್ತವೆ.<br><br>ಮುಂದುವರೆದು, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ, ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ನಿಗಮದಿಂದ ಆಚರಣೆ ಮಾಡುತ್ತಿರುವ ಸಾರಿಗೆಗಳು ಅವಶ್ಯಕತೆಗೆ ಅನುಗುಣವಾಗಿರುತ್ತವೆ. |

ಸಂಖ್ಯೆ: ಟಿಡಿ 54 ಟಿಸಿಕ್ಯೂ 2021

**(ಲಕ್ಷ್ಮಣ ಸಂಗಪ್ಪ ಸವದಿ)**
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು